# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1674
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಆದಾಯ-ವೆಚ್ಚ ಇವುಗಳ ಕಳೆದ ಐದು ವರ್ಷಗಳ ಆದಾಯ-ವೆಚ್ಚದ ವರ್ಷವಾರು ವಿವರವೇನು; ಪ್ರಯಾಣಿಕರ ಸಂಖ್ಯೆಯಲ್ಲಿ ಎಷ್ಟು ಶೇಕಡಾ ಏರಿಕೆಯಾಗಿದೆ; ಒಟ್ಟು ಆದಾಯ ಮತ್ತು ವೆಚ್ಚದಲ್ಲಿ ಎಷ್ಟು ಹೆಚ್ಚಳವಾಗಿದೆ; | ಕಳೆದ ಐದು ವರ್ಷಗಳಲ್ಲಿ ನಾಲ್ಕು ಸಾರಿಗೆ ನಿಗಮಗಳ ಆದಾಯ, ವೆಚ್ಚ ಹಾಗೂ ಪ್ರಯಾಣಿಕರ ಸಂಖ್ಯೆಯಲ್ಲಿನ ಶೇಕಡವಾರು ಏರಿಕೆಯ ವರ್ಷವಾರು ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ |
| ಆ) | ಪ್ರತಿ ನಿಗಮದಲ್ಲಿ ಒಂದು ಬಸ್‌ನ ಮಾಸಿಕ ಸರಾಸರಿ ಆದಾಯ ಮತ್ತು ವೆಚ್ಚದ ವಿವರವೇನು ಎಕ್ಸ್‌ಪ್ರೆಸ್ ಬಸ್‌ಗಳಿಗೆ, ಸಾಮಾನ್ಯ (ನಗರ/ಗ್ರಾಮೀಣ), ಪ್ರತಿ ಕಿ.ಮೀಗೆ ಸರಾಸರಿ ಆದಾಯ ಮತ್ತು ಸರಾಸರಿ ವೆಚ್ಚ ಎಷ್ಟು; | ನಿಗಮಗಳಲ್ಲಿನ ಒಂದು ಬಸ್‌ನ ಮಾಸಿಕ ಸರಾಸರಿ ಆದಾಯ ಮತ್ತು ವೆಚ್ಚ ಹಾಗೂ ಎಕ್ಸ್‌ಪ್ರೆಸ್ ಬಸ್‌ಗಳ ಮತ್ತು ಸಾಮಾನ್ಯ (ನಗರ/ಗ್ರಾಮೀಣ) ಬಸ್ಸುಗಳ ಪ್ರತಿ ಕಿ.ಮೀ.ಗೆ ಸರಾಸರಿ ಆದಾಯ ಮತ್ತು ವೆಚ್ಚದ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ) | ನಾಲ್ಕು ನಿಗಮಗಳಲ್ಲಿ ಲಾಭದಲ್ಲಿರುವ ವಿಭಾಗಗಳು ಯಾವುವು; ನಷ್ಟದಲ್ಲಿರುವ ವಿಭಾಗಗಳನ್ನು ಸುಧಾರಿಸಲು ಕೈಗೊಂಡ ಕ್ರಮಗಳೇನು; ಡೀಸೆಲ್ ಬೆಲೆ, ಸಿಬ್ಬಂದಿ ವೇತನ, ಬಸ್ ನಿರ್ವಹಣಾ ವೆಚ್ಚ ಹಾಗೂ ಸಾಲದ ಬಡ್ಡಿದರ ಏರಿಕೆಯಿಂದ ಉಂಟಾಗಿರುವ ಹೆಚ್ಚುವರಿ ಭಾರ ಎಷ್ಟು; | ನಾಲ್ಕು ಸಾರಿಗೆ ನಿಗಮಗಳ ಪೈಕಿ ಕ.ರಾ.ರ.ಸಾ.ನಿಗಮದ ಬೆಂಗಳೂರು ಕೇಂದ್ರ, ತುಮಕೂರು, ಚಿಕ್ಕಬಳ್ಳಾಪುರ, ಮೈಸೂರು (ಗ್ರಾ), ಚಾಮರಾಜನಗರ, ದಾವಣಗೆರೆ, ಚಿತ್ರದುರ್ಗ ವಿಭಾಗಗಳು; ವಾ.ಕ.ರ.ಸಾ.ಸಂಸ್ಥೆಯ ಹಾವೇರಿ ವಿಭಾಗ; ಮತ್ತು ಕ.ಕ.ರ.ಸಾ.ನಿಗಮದ ಹೊಸಪೇಟೆ ವಿಭಾಗ ಲಾಭದಾಯಕವಾಗಿರುತ್ತವೆ.<br>ನಷ್ಟದಲ್ಲಿರುವ ವಿಭಾಗಗಳನ್ನು ಸುಧಾರಿಸಲು ಕೈಗೊಂಡ ಕ್ರಮಗಳನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ.<br><br>ಕಳೆದ ಮೂರು ವರ್ಷಗಳಲ್ಲಿ 4 ನಿಗಮಗಳ ಡೀಸೆಲ್ ವೆಚ್ಚ, ಸಿಬ್ಬಂದಿ ವೇತನ ವೆಚ್ಚ, ಬಸ್ ನಿರ್ವಹಣಾ ವೆಚ್ಚ ಹಾಗೂ ಸಾಲದ ಬಡ್ಡಿ ವೆಚ್ಚದ ವಿವರಗಳನ್ನು **ಅನುಬಂಧ-4**ರಲ್ಲಿ ನೀಡಲಾಗಿದೆ. |
| ಈ) | ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ ಅವಧಿ ಮೀರಿದ ಸಾರಿಗೆ ವಾಹನಗಳನ್ನು ಹೇಗೆ ವಿಲೇವಾರಿ ಮಾಡಲಾಗುತ್ತಿದೆ; ಕಳೆದ ಮೂರು ವರ್ಷಗಳಲ್ಲಿ ಹಳೆ ಬಸ್ಸು ಸಹಿತ ಎಲ್ಲಾ ನಿರುಪಯುಕ್ತ ಸ್ಕ್ರಾಪ್ ಹರಾಜು ನಿಂದ ವಸೂಲಿಯಾದ ಮೊತ್ತವೆಷ್ಟು; ಕಳೆದ ಮೂರು ವರ್ಷಗಳಲ್ಲಿ | ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ ಅವಧಿ ಮೀರಿದ ಸಾರಿಗೆ ವಾಹನಗಳನ್ನು, ನಿರುಪಯುಕ್ತ ವಾಹನಗಳೆಂದು ಘೋಷಿಸಿ, ಅವುಗಳನ್ನು, ಮೆ\|\| ಎಂ.ಎಸ್.ಟಿ.ಸಿ (ಕೇಂದ್ರ ಸರಕಾರದ ಅಧೀನ ಸಂಸ್ಥೆ) ರವರ ಆರ್.ವಿ.ಎಸ್.ಎಫ್ ಪೋರ್ಟಲ್ ನಲ್ಲಿ ಇ-ಹರಾಜು ಪ್ರಕ್ರಿಯೆ ಮೂಲಕ ಅತಿ ಹೆಚ್ಚು ಬಿಡ್ ಸಲ್ಲಿಸಿದ ಬಿಡ್ಡುದಾರರಿಗೆ ವಿಲೇವಾರಿ ಮಾಡಲಾಗುತ್ತದೆ.<br><br>ನಿಗಮಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಳೆ ಬಸ್ಸು ಸಹಿತ ಎಲ್ಲಾ ನಿರುಪಯುಕ್ತ ಸ್ಕ್ರಾಪ್ ಮಾರಾಟದಿಂದ ಸಂಗ್ರಹವಾದ ಮೊತ್ತದ ವಿವರಗಳು ಈ ಕೆಳಕಂಡಂತಿದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಹಳೆ ಸಾರಿಗೆ ಬಸ್ಸುಗಳಿಗೆ ಹರಾಜು ಪ್ರಕ್ರಿಯೆಯಲ್ಲಿ ನಿಗಧಿಪಡಿಸಿದ ಕನಿಷ್ಠ ಮೌಲ್ಯವೆಷ್ಟು:</td><td>(ಮೊತ್ತ ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th>ನಿರುಪಯುಕ್ತ ವಾಹನ ಗಳಿಂದ ಸಂಗ್ರಹ ವಾದ ಮೊತ್ತ</th><th>ನಿರುಪಯುಕ್ತ ಇತರೆ ಸಾಮಾಗ್ರಿ ಗಳಿಂದ ಸಂಗ್ರಹವಾದ ಮೊತ್ತ</th><th>ಒಟ್ಟು</th></tr>
<tr><td>2022-23</td><td>36.51</td><td>61.15</td><td>97.66</td></tr>
<tr><td>2023-24</td><td>23.66</td><td>42.03</td><td>65.69</td></tr>
<tr><td>2024-25</td><td>16.20</td><td>49.30</td><td>65.50</td></tr>
</table>
ರಾಜ್ಯ ರಸ್ತೆ ಸಾರಿಗೆ ನಾಲ್ಕು ನಿಗಮಗಳಲ್ಲಿ ನಿರುಪಯುಕ್ತಗೊಂಡ ಹಳೆಯ ವಾಹನಗಳಿಗೆ ಪ್ರಸ್ತುತ ಕನಿಷ್ಠ ಹರಾಜು ಮೌಲ್ಯವನ್ನು ನಿಗದಿಪಡಿಸಲಾಗುತ್ತಿಲ್ಲ. ಅವಧಿ ಮೀರಿರುವ ಸಾರಿಗೆ ವಾಹನಗಳನ್ನು ನಿಷ್ಕ್ರಿಯಗೊಳಿಸಿ ಟೆಂಡರ್ ಮೂಲಕ ಹರಾಜು ಮಾಡಿ ವಿಲೇವಾರಿ ಮಾಡಲಾಗುತ್ತಿದೆ.</td></tr>
<tr><td>ಉ)</td><td>ರಾಜ್ಯದಲ್ಲಿ ಇನ್ನೂ ಸುಮಾರು 1,700ಕ್ಕೂ ಹೆಚ್ಚು ಗ್ರಾಮಗಳಿಗೆ ಸಮರ್ಪಕ ಬಸ್ ಸೌಲಭ್ಯವಿಲ್ಲದಿರಲು ಕಾರಣವೇನು: ಈ ಗ್ರಾಮಗಳಿಗೆ ಸಾರಿಗೆ ಸೇವೆ ಒದಗಿಸಲು ಕೈಗೊಂಡ ಕ್ರಮವೇನು:</td><td rowspan="2">ಕರ್ನಾಟಕ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ವ್ಯಾಪ್ತಿಯಲ್ಲಿ 31 ಜಿಲ್ಲೆಗಳಿದ್ದು, ಸದರಿ ಜಿಲ್ಲೆಗಳ ಕಾರ್ಯಾಚರಣೆ ವ್ಯಾಪ್ತಿಯಲ್ಲಿ ಒಟ್ಟು 24,259 ಅನುಸೂಚಿಗಳಿಂದ ಕಾರ್ಯಾಚರಣೆ ಮಾಡಲಾಗುತ್ತಿದೆ. ನಿಗಮಗಳ ವ್ಯಾಪ್ತಿಯಲ್ಲಿ ಒಟ್ಟು 32,977 ಗ್ರಾಮಗಳು ಇದ್ದು, ಇದರಲ್ಲಿ 31,228 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ ಹಾಗೂ 1749 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿರುವುದಿಲ್ಲ. ಸಾರಿಗೆ ಸೌಲಭ್ಯ ಒದಗಿಸದೇ ಇರುವ ಗ್ರಾಮಗಳ ಪೈಕಿ 325 ಗ್ರಾಮಗಳಿಗೆ ಭಾರಿ ವಾಹನ ಚಲಿಸುವ ರಸ್ತೆ ಇರುವುದಿಲ್ಲ. ಮುಂದುವರೆದು, ಸದರಿ ಗ್ರಾಮಗಳ ಮುಖ್ಯ ರಸ್ತೆಯ 2.00 ಕಿ.ಮೀ ಅಂತರದಲ್ಲಿ ನಿಗಮ/ಸಂಸ್ಥೆಗಳ ಸಾರಿಗೆ ಸೌಲಭ್ಯವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.<br><br>ಉಳಿದಂತೆ, ಬಹುತೇಕ ಗ್ರಾಮಗಳಿಗೆ ಖಾಸಗಿ ಪ್ರವರ್ತಕರು ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿರುತ್ತಾರೆ.<br><br>ಸಾರಿಗೆ ನಿಗಮಗಳಿಗೆ ಹೊಸ ಬಸ್ಸುಗಳು ಸೇರ್ಪಡೆ ಮತ್ತು ಸಿಬ್ಬಂದಿ ಲಭ್ಯತೆಯನ್ನು ಪರಿಗಣಿಸಿ ಮೂಲಭೂತ ಸೌಕರ್ಯಗಳನ್ನು ಕ್ರೂಢೀಕರಿಸಿ ಕೊಂಡು ಹಂತ ಹಂತವಾಗಿ ಸಾರಿಗೆ ಸೌಲಭ್ಯವಿಲ್ಲದ ಗ್ರಾಮಗಳಿಗೆ ಬಸ್ ಸೌಲಭ್ಯ ಒದಗಿಸಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು.</td></tr>
<tr><td>ಊ)</td><td>ಅವಕಾಶವಿರುವ ಪ್ರದೇಶಗಳಲ್ಲಿ ಸಾರಿಗೆ ಬಸ್ಸು ಸೇವೆಯನ್ನು ಹೊಸ ಪರವಾನಿಗೆಯೊಂದಿಗೆ ವಿಸ್ತರಿಸುವ ಮತ್ತು ಸುಧಾರಿಸುವ ಮೂಲಕ ಆರ್ಥಿಕ ಸ್ಥಿತಿ ತರ್ಕಬದ್ಧಗೊಳಿಸುವ ಬಗ್ಗೆ ಸರ್ಕಾರ ದೀರ್ಘಕಾಲೀನ ಯೋಜನೆಗಳೇನು?</td></tr>
</table>

ಸಂಖ್ಯೆ: ಟಿಡಿ 98 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**

ಅನುಬಂಧ-1

## ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಆದಾಯ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿದೆ.

(ಮೊತ್ತ ರೂ.ಕೋಟಿಗಳಲ್ಲಿ)

| ವರ್ಷ | KSRTC | | | BMTC | | | NWKRTC | | | KKRTC | | | TOTAL | | |
|---|---|---|---|---|---|---|---|---|---|---|---|---|---|---|---|
| | ಒಟ್ಟು ಆದಾಯ | ಒಟ್ಟು ವೆಚ್ಚ | ಹೆಚ್ಚಳ | ಒಟ್ಟು ಆದಾಯ | ಒಟ್ಟು ವೆಚ್ಚ | ಹೆಚ್ಚಳ | ಒಟ್ಟು ಆದಾಯ | ಒಟ್ಟು ವೆಚ್ಚ | ಹೆಚ್ಚಳ | ಒಟ್ಟು ಆದಾಯ | ಒಟ್ಟು ವೆಚ್ಚ | ಹೆಚ್ಚಳ | ಒಟ್ಟು ಆದಾಯ | ಒಟ್ಟು ವೆಚ್ಚ | ಹೆಚ್ಚಳ |
| 2020-21 | 2,271.92 | 2,853.07 | -581.15 | 1,853.06 | 2,017.26 | -164.20 | 1,282.47 | 1,671.55 | -389.08 | 1,281.42 | 1,467.87 | -186.45 | 6,688.87 | -1,320.88 | 8,009.75 |
| 2021-22 | 2,859.09 | 3,282.40 | -423.31 | 2,115.12 | 2,293.37 | -178.25 | 1,471.61 | 1,934.19 | -462.58 | 1,467.90 | 1,693.72 | -225.82 | 7,913.72 | -1,289.96 | 9,203.68 |
| 2022-23 | 4,573.68 | 4,616.57 | -42.89 | 2,937.66 | 3,015.04 | -77.38 | 2,845.92 | 2,872.07 | -26.15 | 2,239.98 | 2,354.97 | -114.99 | 12,597.24 | -261.41 | 12,858.65 |
| 2023-24 | 4,544.41 | 4,839.84 | -295.43 | 2,613.80 | 3,189.25 | -575.45 | 2,372.91 | 2,695.39 | -322.48 | 2,291.85 | 2,452.97 | -161.12 | 11,822.97 | -1,354.48 | 13,177.45 |
| 2024-25 | 5,406.38 | 5,488.22 | -81.84 | 2,768.27 | 3,438.75 | -670.48 | 2,805.66 | 2,836.77 | -31.11 | 2,772.71 | 2,832.11 | -59.40 | 13,753.02 | -842.83 | 14,595.85 |

## ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸರಾಸರಿ ದಿನವಹಿ ಪ್ರಯಾಣಿಸಿದ ಪ್ರಯಾಣಿಕರುಗಳ ವಿವರಗಳು

| ವರ್ಷ | KSRTC | | BMTC | | NWKRTC | | KKRTC | | TOTAL | |
|---|---|---|---|---|---|---|---|---|---|---|
| | ಸರಾಸರಿ ದಿನವಹಿ ಪ್ರಯಾಣಿಸಿದ ಪ್ರಯಾಣಿಕರು | %ಹೆಚ್ಚಳ | ಸರಾಸರಿ ದಿನವಹಿ ಪ್ರಯಾಣಿಸಿದ ಪ್ರಯಾಣಿಕರು | %ಹೆಚ್ಚಳ | ಸರಾಸರಿ ದಿನವಹಿ ಪ್ರಯಾಣಿಸಿದ ಪ್ರಯಾಣಿಕರು | %ಹೆಚ್ಚಳ | ಸರಾಸರಿ ದಿನವಹಿ ಪ್ರಯಾಣಿಸಿದ ಪ್ರಯಾಣಿಕರು | %ಹೆಚ್ಚಳ | ಸರಾಸರಿ ದಿನವಹಿ ಪ್ರಯಾಣಿಸಿದ ಪ್ರಯಾಣಿಕರು | %ಹೆಚ್ಚಳ |
| 2020-21 | 11.25 | -62.50 | 12.79 | -61.40 | 7.28 | -65.00 | 5.24 | -61.40 | 36.56 | -62.58 |
| 2021-22 | 16.75 | 48.90 | 15.97 | 24.90 | 10.63 | 46.00 | 8.18 | 56.10 | 51.53 | 43.98 |
| 2022-23 | 29.72 | 77.40 | 27.34 | 41.20 | 16.94 | 59.40 | 11.84 | 44.70 | 85.84 | 55.68 |
| 2023-24 | 33.06 | 11.20 | 38.43 | 40.60 | 22.39 | 32.20 | 16.62 | 40.40 | 110.50 | 31.10 |
| 2024-25 | 34.29 | 3.70 | 40.24 | 4.70 | 24.47 | 9.30 | 17.60 | 5.90 | 116.60 | 5.90 |

# ಅನುಬಂಧ-2

**Annexure-2**

Figures in Rupees

| Corp | Avg.Revenue Per bus per month (In Rs. Lakhs) | | Avg. Cost per bus per Month(In Rs. Lakhs) |
|---|---|---|---|
| | 100% shakti Reimbursement | Shakti Reimbursement | |
| KSRTC | 5.14 | 4.3 | 5.19 |
| | | | |
| KKRTC | 4.63 | 3.93 | 4.83 |
| | | | |
| NWKRTC | 4.89 | 3.93 | 4.89 |
| | | | |
| BMTC | 3.21 | 2.47 | 4.3 |

| Corp | Type of Service | Avg.Revenue Per bus per KM (in Rs.) | | Cost per bus per KM (in Rs.) |
|---|---|---|---|---|
| | | 100% shakti Reimbursement | Shakti Reimbursement | |
| KSRTC | Exp | 53.74 | 42.51 | 48.96 |
| | Ord | 46.03 | 35.15 | 49.18 |
| KKRTC | Exp | 50.24 | 43.78 | 49.69 |
| | Ord | 42.21 | 35.67 | 47.40 |
| NWKRTC | Exp | 52.93 | 44.08 | 47.72 |
| | Ord | 50.87 | 40.53 | 52.80 |
| BMTC | Ord | 60.62 | 46.64 | 81.16 |

## ಅನುಬಂಧ-3

### ನಷ್ಟದಲ್ಲಿರುವ ವಿಭಾಗಗಳನ್ನು ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡಿರುವ ಕ್ರಮಗಳ/ಯೋಜನೆಗಳ ವಿವರಗಳು ಈ ಕೆಳಕಂಡಂತಿದೆ

- ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿ.ಸ್ಲೀಪರ್, ನಾನ್ ಎ.ಸಿ.ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್, ಅಂಬಾರಿ ಉತ್ಸವ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಪುದುಚೆರಿ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರ ರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇದ್ದು ಒಪ್ಪಂದಗಳ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಈ ರಾಜ್ಯಗಳ ಜೊತೆಗೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯ ಗಳಿಸಲು ಅವಕಾಶವಾಗುವುದು.
- ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine) ಜಾರಿಗೆ ತಂದಿರುತ್ತದೆ. ಡೈನಾಮಿಕ್ ಕ್ಯೂರ್ ಕೋಡ್ ಮೂಲಕ ಯು.ಪಿ.ಐ. ಮುಖಾಂತರ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆ ಜಾರಿಗೆ ತಂದಿರುತ್ತದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ನಿಗಮಗಳ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್‌ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ-ಬುಕಿಂಗ್ ಮತ್ತು ಇ-ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ.
- ಚಾಲನಾ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ ಘಟಕಗಳಲ್ಲಿ ಗಣಕೀಕೃತ ಡ್ಯೂಟಿ ರೋಟಾ ಸಿಸ್ಟಮ್‌ನ್ನು ಅಳವಡಿಸಿ ಮಾರ್ಗ ನಿಯೋಜನೆಯಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ನಿಗಮದ ಘಟಕಗಳಲ್ಲಿನ ಚಾಲನಾ/ತಾಂತ್ರಿಕ ಸಿಬ್ಬಂದಿಯ ರಜೆ ಮಂಜೂರಾತಿಯಲ್ಲಿ ಪಾರದರ್ಶಕತೆ ತರಲು ರಜೆ ಪಡೆಯುವ ಸಿಬ್ಬಂದಿಗಳು ಮೊಬೈಲ್/ಗಣಕಯಂತ್ರಗಳ ಮೂಲಕ ರಜೆ ಪಡೆಯುವ ಗಣಕೀಕೃತ ರಜೆ ವ್ಯವಸ್ಥೆಯನ್ನು (Online Leave Management System)/HRMS ಅಳವಡಿಸಲಾಗಿದೆ.
- ವಿವಿಧ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಇನ್ನೂ ಹಲವು ಪ್ರವಾಸಿ ತಾಣಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಪ್ಯಾಕೇಜ್ ಟೂರ್‌ಗಳನ್ನು ಪ್ರಾರಂಭಿಸಲಾಗುವುದು.
- ಕಡಿಮೆ ಆದಾಯ ಬರುತ್ತಿರುವ ಅನುಸೂಚಿಗಳನ್ನು ವಿಶ್ಲೇಷಿಸಿ, ಸದರಿ ಅನುಸೂಚಿಗಳನ್ನು ಪರಿಷ್ಕರಿಸುವುದು/ಕಡಿತಗೊಳಿಸುವಿಕೆ ಕಾರ್ಯ ಆಗ್ಗಿಂದಾಗೆ ನಡೆಸಲಾಗುತ್ತಿದೆ. ಬೇಡಿಕೆ ಇರುವ ಮಾರ್ಗಗಳಲ್ಲಿ ಹೊಸ ಅನುಸೂಚಿಗಳನ್ನು ಪ್ರಾರಂಭಿಸಲಾಗುತ್ತಿದೆ.

- ಆದಾಯ ಸೋರಿಕೆಯನ್ನು ತಡೆಗಟ್ಟಲು ಮಾರ್ಗ ತನಿಖಾ ಕಾರ್ಯವನ್ನು ವಿಭಾಗ/ಕೇಂದ್ರ ಕಛೇರಿಯ ಮಟ್ಟದಲ್ಲಿ ನಡೆಸಲಾಗುತ್ತಿದೆ.
- ವಿಭಾಗಗಳ ಅಧಿಕಾರಿಗಳು ಮೇಲಿಂದ ಮೇಲೆ ಘಟಕಗಳಿಗೆ ಭೇಟಿ ನೀಡಿ, ಕಡಿಮೆ ಆದಾಯ ಬರುವ ಅನುಸೂಚಿಗಳನ್ನು ಪರಿಶೀಲಿಸಿ ಸದರಿ ಅನುಸೂಚಿಗಳ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಖಾಲಿ ಇರುವ ಮಳಿಗೆಗಳಿಗೆ ಟೆಂಡರ್ ಪ್ರಕ್ರಿಯೆ ಸರಳೀಕರಣಗೊಳಿಸಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಜಾಹೀರಾತು ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ನಿಗಮದ ತೆರೆದ ನಿವೇಶನಗಳಲ್ಲಿ ಬಾಡಿಗೆ ಆಧಾರದ ಮೇಲೆ ಇಂಧನ ಬಂಕ್ ಅಳವಡಿಸಿ ವಾಣಿಜ್ಯ, ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಖಾಸಗಿ ವಾಹನಗಳ ಪೈಪೋಟಿ ಇರುವ ಮಾರ್ಗಗಳಲ್ಲಿ ಪ್ರೋತ್ಸಾಹದಾಯಕ ಪ್ರಯಾಣದರಗಳನ್ನು ಜಾರಿಗೊಳಿಸಿ ಪ್ರಯಾಣಿಕರನ್ನು ನಿಗಮದ ಸಾರಿಗೆಗಳತ್ತ ಆಕರ್ಷಿಸಲು ಕ್ರಮವಹಿಸಲಾಗುತ್ತಿದೆ
- ಹೊಸ ತಾಂತ್ರಿಕತೆಯ ವಾಹನಗಳನ್ನು ಸೇರ್ಪಡೆಗೊಳಿಸಿ ಮಾರ್ಗ ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ. ವಿಭಾಗದ ಘಟಕಗಳಿಂದ ವಾಹನಗಳನ್ನು ಮಾರ್ಗ ಕಾರ್ಯಾಚರಣೆಗೆ ನಿಯೋಜಿಸುವ ಮುನ್ನ ವಾಹನಗಳ ತಾಂತ್ರಿಕ & ಶುಚಿತ್ವವನ್ನು ಪರಿಶೀಲಿಸಿ ಸುಸ್ಥಿತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಂಡ ನಂತರವೇ ಮಾರ್ಗ ಕಾರ್ಯಾಚರಣೆಗೆ ನಿಯೋಜಿಸುವುದರಿಂದ ಮಾರ್ಗ ಮಧ್ಯೆ ಯಾವುದೇ ತೊಂದರೆಗಳಿಲ್ಲದೆ ಸುಗಮ ಪ್ರಯಾಣಕ್ಕೆ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.
- ಅಂತೆಯೇ, ವಿಭಾಗದ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಗಳಿಗೆ ಕಾಲ ಕಾಲಕ್ಕೆ ವಾಹನ ತಯಾರಿಕಾ ಸಂಸ್ಥೆ/ ವತಿಯಿಂದ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಗಳನ್ನು ಹಮ್ಮಿಕೊಂಡು, ಉತ್ತಮ ಚಾಲನಾ ಕೌಶಲ್ಯಗಳ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.
- ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಹೊರಗುತ್ತಿಗೆ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಿ ತಯಾರಿಕಾ ಸಂಸ್ಥೆ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ಕಾಲ ಕಾಲಕ್ಕೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ವಾಹನಗಳ ಉತ್ತಮ ತಾಂತ್ರಿಕ ನಿರ್ವಹಣಾ ವಿಧಾನಗಳನ್ನು ಅನುಸರಿಸಿ ಅಪಘಡಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.
- ವಾಹನಗಳಲ್ಲಿ ಅಳವಡಿಸಿರುವ ಟೈರುಗಳ ನಿರ್ವಹಣೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿ ಟೈರುಗಳ ಮೇಲಿನ ವೆಚ್ಚವನ್ನು ನಿಯಂತ್ರಿಸಲಾಗುತ್ತಿರುತ್ತದೆ. ಕಾರ್ಯಾಚರಣೆಯಲ್ಲಿರುವ ವಾಹನಗಳಿಗೆ ಅವಶ್ಯಕತೆಗನುಗುಣವಾಗಿ ಅಗತ್ಯ ಬಿಡಿಭಾಗಗಳನ್ನು ಮೂಲ ತಯಾರಿಕಾ ಸಂಸ್ಥೆ ಹಾಗೂ ಸರಬರಾಜುದಾರರುಗಳಿಂದಲೇ ಉತ್ತಮ ಗುಣಮಟ್ಟದ ಬಿಡಿಭಾಗಗಳನ್ನು ಖರೀದಿಸಿ ವಾಹನಗಳಿಗೆ ಅಳವಡಿಸಲಾಗುತ್ತಿರುತ್ತದೆ.
- ಕರಾರಸಾ ನಿಗಮದಲ್ಲಿ ಹೆಚ್ಚಿನ ಕಿಮೀ ಕ್ರಮಿಸಿ ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ವಾಹನಗಳಿಗೆ ಅವಶ್ಯವಿದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ವಾಹನಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದ್ದು ಇಲ್ಲಿಯವರೆಗೂ ಒಟ್ಟು 1324 ವಾಹನಗಳ ಕವಚ ಪುನಶ್ಚೇತನಗೊಳಿಸಲಾಗಿರುತ್ತದೆ. ಈ ಉಪಕ್ರಮವು ಹೊಸ ಬಸ್‌ಗಳನ್ನು ಖರೀದಿಸುವ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಿದೆ.

# ಅನುಬಂಧ-4

| ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಆದಾಯ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿದೆ. | | | | | | | | | | |
|---|---|---|---|---|---|---|---|---|---|---|
| | | | | | | | | | | (ಮೊತ್ತ ರೂ.ಕೋಟಿಗಳಲ್ಲಿ) |
| ವರ್ಷ | KSRTC | | BMTC | | NWKRTC | | KKRTC | | TOTAL | |
| | ಒಟ್ಟು ಆದಾಯ | ಒಟ್ಟು ವೆಚ್ಚ | ಒಟ್ಟು ಆದಾಯ | ಒಟ್ಟು ವೆಚ್ಚ | ಒಟ್ಟು ಆದಾಯ | ಒಟ್ಟು ವೆಚ್ಚ | ಒಟ್ಟು ಆದಾಯ | ಒಟ್ಟು ವೆಚ್ಚ | ಒಟ್ಟು ಆದಾಯ | ಒಟ್ಟು ವೆಚ್ಚ |
| 2020-21 | 2,271.92 | 2,853.07 | 1,853.06 | 2,017.26 | **1,282.47** | 1,671.55 | 1,281.42 | 1,467.87 | **6,688.87** | **8,009.75** |
| 2021-22 | 2,859.09 | 3,282.40 | 2,115.12 | 2,293.37 | **1,471.61** | 1,934.19 | 1,467.90 | 1,693.72 | **7,913.72** | **9,203.68** |
| 2022-23 | 4,573.68 | 4,616.57 | 2,937.66 | 3,015.04 | **2,845.92** | 2,872.07 | 2,239.98 | 2,354.97 | **12,597.24** | **12,858.65** |
| 2023-24 | 4,544.41 | 4,839.84 | 2,613.80 | 3,189.25 | **2,372.91** | 2,695.39 | 2,291.85 | 2,452.97 | **11,822.97** | **13,177.45** |
| 2024-25 (Un- | 5,406.38 | 5,488.22 | 2,768.27 | 3,438.75 | **2,805.66** | 2,836.77 | 2,772.71 | 2,832.11 | **13,753.02** | **14,595.85** |

**ಡೀಸೆಲ್ ವೆಚ್ಚ, ಸಿಬ್ಬಂದಿ ವೇತನ ವೆಚ್ಚ, ಬಸ್ ನಿರ್ವಹಣಾ ವೆಚ್ಚ ಹಾಗೂ ಸಾಲದ ಬಡ್ಡಿ ವೆಚ್ಚದ ವಿವರಗಳು ಈ ಕೆಳಕಂಡಂತಿದೆ.**

(ಮೊತ್ತ ರೂ.ಕೋಟಿಗಳಲ್ಲಿ)

| ವರ್ಷ | ಡೀಸೆಲ್ ವೆಚ್ಚ | | | | | ಸಿಬ್ಬಂದಿ ವೆಚ್ಚ | | | | |
|---|---|---|---|---|---|---|---|---|---|---|
| | KSRTC | BMTC | NWKRTC | KKRTC | TOTAL | KSRTC | BMTC | NWKRTC | KKRTC | TOTAL |
| 2022-23 | 1,821.00 | 810.66 | 968.71 | 849.19 | **4,449.56** | 1,817.11 | 1,761.96 | 1,465.92 | 1,196.13 | **6,241.12** |
| 2023-24 | 1,826.46 | 820.30 | 956.60 | 904.28 | **4,507.64** | 2,167.64 | 1,849.13 | 1,316.42 | 1,220.81 | **6,554.00** |
| 2024-25 | 1,958.72 | 794.22 | 998.16 | 993.27 | **4,744.37** | 2,314.73 | 1,861.70 | 1,321.23 | 1,257.78 | **6,755.44** |

| ವರ್ಷ | ಬಸ್ ನಿರ್ವಹಣಾ ವೆಚ್ಚ | | | | | ಸಾಲದ ಬಡ್ಡಿ ವೆಚ್ಚ | | | | |
|---|---|---|---|---|---|---|---|---|---|---|
| | KSRTC | BMTC | NWKRTC | KKRTC | TOTAL | KSRTC | BMTC | NWKRTC | KKRTC | TOTAL |
| 2022-23 | 33.22 | 85.99 | 113.88 | 81.10 | **314.19** | 19.83 | 59.88 | 17.48 | 7.31 | **104.50** |
| 2023-24 | 46.08 | 93.73 | 137.61 | 92.42 | **369.84** | 14.45 | 48.16 | 13.04 | 12.98 | **88.63** |
| 2024-25 | 61.54 | 83.51 | 129.93 | 101.42 | **376.40** | 23.58 | 26.89 | 8.81 | 16.00 | **75.28** |

| ವರ್ಷ | REVENUE FROM SCRAP | | | | |
|---|---|---|---|---|---|
| | KSRTC | BMTC | NWKRTC | KKRTC | TOTAL |
| 2022-23 | 25.79 | 12.19 | 5.82 | 17.35 | **61.15** |
| 2023-24 | 12.69 | 10.71 | 7.96 | 10.67 | **42.03** |
| 2024-25 | 13.21 | 27.00 | 6.12 | 2.97 | **49.30** |